ಕಥೆ

# ಸಂಕರ



**ಮಲ್ಲಿಕಾರ್ಜುನ ಹುಲಗಬಾಳಿ**

ಕಲೆ: ಎಸ್. ವಿ. ಹೂಗಾರ್

ಪದ್ಮಳಿಂದ ಮತ್ತೊಂದು ಪತ್ರ. ಈ ತಿಂಗಳಲ್ಲಿ ಮೂರನೆಯದು. ತನ್ನ ಬದುಕಿನ ಲಯವನ್ನು ವ್ಯತ್ಯಸ್ಥಗೊಳಿಸಬಲ್ಲ ಪತ್ರ. ಅದುವೇ ಮೂಲವಾಗಬಹುದಾದ ಅಹಿತಕರ ಪರಿಣಾಮಗಳು. ಒಂದರ ಹಿಂದೆ ಮತ್ತೊಂದು ಮನದ ಹುತ್ತದೊಳಗೆ ಹೆಡೆಯಾಡತೊಡಗಿದಂತೆ ತಳಮಳ ಸುರುವಿಟ್ಟುಕೊಂಡಿತು.

ಇಂಥ ಸ್ಥಿತಿಯೊಳಗೆ ಕ್ಲಾಸ್ ತಕ್ಕೊಳ್ಳೋದು ದುಸ್ತರ ಅನಿಸಿ, ಅಳುಕು ಕಾಣಿಸಿಕೊಂಡದ್ದೆ, ರಜೆ ಚೀಟಿ ಗೀಚಿ, ಪ್ರಿನ್ಸಿಪಾಲರ ಚೇಂಬರ್‌ಗೆ ಧಾವಿಸಿದ.

'ಸರ್, ಎರಡು ದಿನಕ್ಕೆ ರಜೆ ಬೇಕಿತ್ತು'.

'ಯಾಕ್ರೀ ದೇಸಾಯ್ರ, ಒಂಥರಾ ಇದ್ದಾಂಗದ, ಆರಾಮಿಲ್ಲೇನು?' ಪ್ರಿನ್ಸಿಪಾಲ್ ಪಾಟೀಲ ಕಳಕಳಿಯಿಂದ ಕೇಳುತ್ತಾರೆ.

'ಹೌಂದ್ರಿ ಸರ, ಒಂದ್ ದೊಡ್ಡ ಹುದಲಾಗ ಸಿಕ್ಕೊಂಡೇನಿ ರ್‍ರಿ... ಇದರಾಗಿಂದ ಹ್ಯಾಂಗ್ ಹೊರ

